# ಸಕಲೇಶಪುರದ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ

ಸಿ ಸಿ ಸಂಖ್ಯೆ:೮೫೧-೨೦೨೪ಃ

ಫಿರ್ಯಾದುದಾರರು ಃ ರಾಜ್ಯದ ಪರವಾಗಿ

ನಗರ ಪೊಲೀಸ್ ಠಾಣೆ

-ವಿರುದ್ಧ-

ಆರೋಪಿತರು ಃ ಸುಪ್ರೀತ್ ಮತ್ತು ಇನ್ನೊಬ್ಬರು

:ದೋಷಾರೋಪಣೆ :

ನಾನು ಶ್ರೀ ಜಯಪ್ರಕಾಶ್.ವಿ. ಬಿ.ಎ., ಎಲ್. ಎಲ್. ಬಿ., ವ್ಯವಹಾರ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರಾದ ನಾನು ಆರೋಪಿತರಾದಃ

ಆ.1 ಸುಪ್ರೀತ್ ಬಿನ್ ಗೋಪಾಲಕೃಷ್ಣ
ವಯ್ಯಸ್ಸು 25 ವರ್ಷ, ಚಾಲಕ
ಆ.2 ಗೋಪಾಲಕೃಷ್ಣ ಬಿನ್ ಲೇಟ್
ಚನ್ನವೀರಯ್ಯ, ವಯ್ಯಸ್ಸು 48
ವರ್ಷ, ಕೂಲಿ
ಇಬ್ಬರು ವಾಸ ಮಳಳ್ಳಿ ಗ್ರಾಮ,
ಕಸಬ ಹೋಬಳಿ,
ಸಕಲೇಶಪುರ ತಾಲ್ಲೂಕು,
ಹಾಸನ.

ನಿಮಗೆ ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆಃ

1. ದಿನಾಂಕಃ10-02-2024 ಕ್ಕೆ 6 ವರ್ಷಗಳ ಹಿಂದೆ ಸಕಲೇಶಪುರ ತಾಲ್ಲೂಕು, ಕಸಬ ಹೋಬಳಿ, ದೊಡ್ಡನಾಗರ ಗ್ರಾಮದ ವಾಸಿಗಳಾದ ಚಾ ಸಾ 2 ಶ್ರೀ ಪಾಪಣ್ಣ ಮತ್ತು ಚಾ ಸಾ 3 ಶ್ರೀಮತಿ ಗೌರಮ್ಮ ಇವರ ಮಗಳಾದ ಚಾ ಸಾ 1 ಶ್ರೀಮತಿ ಸೌಮ್ಯಲತಾ,

ಫಿರ್ಯಾದಿ ಇವರನ್ನು ಮೇಲ್ಕಂಡ ಆರೋಪಿತರಾದ ನಿಮ್ಮಗಳ ಪೈಕಿ ಒಂದನೇ ಆರೋಪಿಯಾದ ನೀವು ಕೆ.ಹೊಸಕೋಟೆ ಹೋಬಳಿ, ಅಡಿಬೈಲು ರಂಗನಾಥಸ್ವಾಮಿ ದೇವಸ್ಥಾನದ ಬಳಿ ಮದುವೆ ಮಾಡಿಕೊಂಡಿದ್ದು, ಮದುವೆಯಾದ ನಂತರ ಸಮಾನ ಉದ್ದೇಶವನ್ನು ಹೊಂದಿ ಮೇಲ್ಕಂಡ ಒಂದನೇ ಆರೋಪಿಯಾದ ನೀವು ಚಾ ಸಾ 1 ಸೌಮ್ಯಲತಾ ಫಿರ್ಯಾದಿಯವರಿಗೆ ಪ್ರತಿದಿನ ಮಧ್ಯಪಾನ ಮಾಡಿಕೊಂಡು ಬಂದು ಅವರಿಗೆ ಮಾನಸಿಕವಾಗಿ ಹಾಗೂ ದೈಹಿಕವಾಗಿ ಹಿಂಸೆಯನ್ನು ನೀಡಿ ಕಿರುಕುಳ ನೀಡಿದ್ದು ಅಲ್ಲದೆ ಚಾ ಸಾ 1 ರವರನ್ನು ಮಗುವಿನ್ನೊಂದಿಗೆ ಅದೇ ದಿನ ಮನೆಯಿಂದ ಹೊರದೂಡಿದ್ದು , ಆ ನಿಮಿತ್ತದಿಂದ ಮೇಲ್ಕಂಡ ಒಂದನೇ ಆರೋಪಿಯಾದ ನೀವು, ಭಾರತೀಯ ದಂ ಸಂಹಿತೆ ಕಲಂ.498(ಎ) ಸಹ ಕಲಂ.34 ಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವಿರಿ.

2. ಮೇಲೆ ಹೇಳಿದ ದಿನಾಂಕ, ಸಮಯ , ಹಾಗೂ ಸ್ಥಳದಲ್ಲಿ ಸಮಾನ ಉದ್ದೇಶದಿಂದ ಮೇಲ್ಕಂಡ ಆರೋಪಿಗಳಾದ ನೀವುಗಳು ಚಾ ಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ನಿಂದನೆ ಮಾಡಿ ಇದರಿಂದ ಚಾ ಸಾ 1 ರವರು ಉದ್ರೇಕಗೊಂಡು ಸಾರ್ವಜನಿಕ ಶಾಂತಿಗೆ ಭಂಗವನ್ನುಂಟು ಮಾಡಿದ್ದು , ಆ ನಿಮಿತ್ತದಿಂದ ಭಾರತೀಯ ದಂ ಸಂಹಿತೆ ಕಲಂ.504 ಸಹ ಕಲಂ.34 ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವಿರಿ.

3. ಮೇಲೆ ಹೇಳಿದ ದಿನಾಂಕ, ಸಮಯ , ಹಾಗೂ ಸ್ಥಳದಲ್ಲಿ ಸಮಾನ ಉದ್ದೇಶದಿಂದ ಮೇಲ್ಕಂಡ ಆರೋಪಿಗಳಾದ ನಿಮ್ಮಗಳ ಪೈಕಿ ಒಂದನೇ ಆರೋಪಿಯಾದ ನೀವು ಚಾ ಸಾ 1 ಸೌಮ್ಯಲತಾ ಫಿರ್ಯಾದಿಯವರಿಗೆ ಮಾನಸಿಕವಾಗಿ ಹಾಗೂ ದೈಹಿಕವಾಗಿ ಹಿಂಸೆಯನ್ನು ನೀಡಿ ಕಿರುಕುಳ ನೀಡಿದ್ದು ಅಲ್ಲದೆ ಚಾ ಸಾ 1 ರವರಿಗೆ ಕೈಗಳಿಂದ ಹಲ್ಲೆಮಾಡಿದ್ದು , ಆ ನಿಮಿತ್ತದಿಂದ 1 ನೇ ಆರೋಪಿಯಾದ ನೀವು , ಭಾರತೀಯ ದಂಡ ಸಂಹಿತೆ ಕಲಂ.323 ಸಹ ಕಲಂ.34 ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವಿರಿ.

4. ಮೇಲೆ ಹೇಳಿದ ದಿನಾಂಕ, ಸಮಯ , ಹಾಗೂ ಸ್ಥಳದಲ್ಲಿ ಸಮಾನ ಉದ್ದೇಶದಿಂದ ಚಾ ಸಾ 1 ರವರಿಗೆ ಕೈಗಳಿಂದ ಹಲ್ಲೆಮಾಡಿದ್ದು ಅಲ್ಲದೇ ಚಾ ಸಾ 2 ಶ್ರೀ ಪಾಪಣ್ಣ ಇವರು ವಿಚಾರ ತಿಳಿದು ಚಾ ಸಾ 1 ಸೌಮ್ಯಲತಾ ಫಿರ್ಯಾದಿ ಇವರನ್ನು ಕರೆದುಕೊಂಡು ಬರಲು ಹೊದಾಗ ಮೇಲ್ಕಂಡ ಆರೋಪಿಗಳಾದ ನಿಮ್ಮಗಳ ಪೈಕಿ ಒಂದನೇ ಆರೋಪಿಯಾದ ನೀವು ಸಮಾನ ಉದ್ದೇಶದಿಂದ ಚಾ ಸಾ 1 ರವರನ್ನು ಉದ್ದೇಶಿಸಿ ಮನೆಗೆ ಬಂದರೆ ಸೀಮೆಎಣ್ಣೆ ಹಾಕಿ ಸುಟ್ಟು ಕೊಲೆಮಾಡುವುದಾಗಿ ಬೆದರಿಸಿದು, ಆ ನಿಮಿತ್ತದಿಂದ 1 ನೇ ಆರೋಪಿಯಾದ ನೀವು , ಭಾರತೀಯ ದಂಡ ಸಂಹಿತೆ ಕಲಂ.506 ಸಹ ಕಲಂ.34 ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವಿರಿ.

(ಮೇಲ್ಕಂಡ ಆರೋಪಿತರಾದ ನಿಮಗೆ ತಿಳಿದ ಕನ್ನಡ ಭಾಷೆಯಲ್ಲಿ ಈ ಮೇಲೆ ಹೇಳಿದ ದೋಷಾರೋಪಣೆಯನ್ನು ಓದಿ ವಿವರಿಸಿ ಹೇಳಿದ್ದು , ನಂತರದಲ್ಲಿ ಆರೋಪಿತರಾದ ನೀವುಗಳು ನೀಡಿದ ಉತ್ತರವನ್ನು ನಾನೇ ಬರೆದುಕೊಂಡು ಸರಿಯಾಗಿದೆ ಎಂದು ಧೃಢಿಕರಿಸುತ್ತೇನೆ.)

ಸಕಲೇಶಪುರ
ದಿನಾಂಕ:04-08-2025

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಸಕಲೇಶಪುರ